# ಪ್ರಾರ್ಥನೆ

## ಭೀಷ್ಮನ ಪ್ರಾರ್ಥನೆ

(ಭಾಗವತದಿಂದ)

ಸಪದಿ ಸಖಿವಚೋ ನಿಶಮ್ಯ ಮಧ್ಯೇ
ನಿಜಪರಯೋರ್ಬಲಯೋಃ ರಥಂ ನಿವೇಶ್ಯ ।
ಸ್ಥಿತವತಿ ಪರಸೈನಿಕಾಯುರಕ್ಷ್ಣಾ
ಹೃತವತಿ ಪಾರ್ಥಸಖೇ ರತಿರ್ಮಮಾಸ್ತು ॥

ಯಾವನು ತನ್ನ ಮಿತ್ರನ ಮಾತನ್ನು ಕೇಳಿ ಅದಕ್ಕನುಗುಣವಾಗಿ ರಥವನ್ನು ಒಡನೆಯೇ ಸ್ವಸೈನ್ಯ ಮತ್ತು ಶತ್ರುಸೈನ್ಯಗಳ ಮಧ್ಯದಲ್ಲಿ ನಿಲ್ಲಿಸಿದವನಾಗಿ, ಕೇವಲ ತನ್ನ ದೃಷ್ಟಿಯಿಂದಲೇ ಶತ್ರುಸೈನಿಕರ ಆಯುಸ್ಸನ್ನು ಎಳೆದುಕೊಂಡುಬಿಟ್ಟನೋ, ಅಂತಹ ಪಾರ್ಥನ ಗೆಳೆಯನಾದ ಗೋವಿಂದನಲ್ಲಿ ನನ್ನ ಪರಮಪ್ರೇಮವಿರಲಿ.

ಸ್ವನಿಗಮಮಪಹಾಯ ಮತ್ಪ್ರತಿಜ್ಞಾ-
ಮೃತಮಧಿಕರ್ತುಮವಪ್ಲುತೋ ರಥಸ್ಥಃ ।
ಧೃತರಥಚರಣೋಽಭ್ಯಯಾಚ್ಚಲದ್ಗು-
ರ್ಹರಿರಿವ ಹಂತುಮಿಭಂ ಗತೋತ್ತರೀಯಃ ॥

ಶಿತವಿಶಿಖಹತೋ ವಿಶೀರ್ಣದಂಶಃ
ಕ್ಷತಜಪರಿಪ್ಲುತ ಆತತಾಯಿನೋ ಮೇ ।
ಪ್ರಸಭಮಭಿಸಸಾರ ಮದ್ವಧಾರ್ಥಂ
ಸ ಭವತು ಮೇ ಭಗವಾನ್ಗತಿರ್ಮುಕುಂದಃ ॥

"ಶ್ರೀಕೃಷ್ಣನು ಯುದ್ಧದಲ್ಲಿ ಶಸ್ತ್ರವನ್ನು ಹಿಡಿಯುವಂತೆ ಮಾಡುತ್ತೇನೆ" ಎಂದು ನಾನು ಪ್ರತಿಜ್ಞೆಮಾಡಿದ್ದೆನು. "ನಾನು ಯುದ್ಧದಲ್ಲಿ ಶಸ್ತ್ರವನ್ನು ಹಿಡಿಯುವುದೇ ಇಲ್ಲ" ಎಂದು ಆತನು ಶಪಥಮಾಡಿದ್ದನು. ಆದರೆ ಭಕ್ತನಾದ ನನ್ನ ಪ್ರತಿಜ್ಞೆಯನ್ನು ನಿಜ ವಾಗಿಸುವುದಕ್ಕಾಗಿ ತನ್ನ ಶಪಥವನ್ನೇ ಮುರಿದು ಸ್ವಾಮಿಯು ರಥದಿಂದ ಕೆಳಕ್ಕೆ ದುಮುಕಿ, ಸಿಂಹವು ಆನೆಯನ್ನು ಸಂಹರಿಸಲು ಅದರ ಮೇಲೆ ಬೀಳುವಂತೆ, ಚಕ್ರವನ್ನೆತ್ತಿಕೊಂಡು ನನ್ನ ಮೇಲೆರಗಲು ರಭಸದಿಂದ ಬಂದನು. ತನ್ನ ಉತ್ತರೀಯವು ಜಾರಿ ಹೋಗು ತ್ತಿರುವುದನ್ನೂ ಗಮನಿಸದೇ ಭೂಮಿಯೇ ಅದುರುವಷ್ಟು ಮಹಾವೇಗದಿಂದ ನನ್ನನ್ನೆದುರಿಸಲು ಧಾವಿಸಿ ಬಂದನು.

ಅವನನ್ನು ವಧಿಸಬಹುದೆಂಬ ಪ್ರಯತ್ನದಲ್ಲಿ ನಾನು ಬಿಟ್ಟ ತೀಕ್ಷ್ಣವಾದ ಬಾಣಗಳಿಂದ ಶರೀರದ ಕವಚವು ಹರಿದುಹೋಗಿ ಮೈಯೆಲ್ಲಾ ರಕ್ತದಿಂದ ತೋಯ್ದುಹೋಗುತ್ತಿರಲು, ಅರ್ಜುನನು ತಡೆಯುತ್ತಿದ್ದರೂ ಕೇಳದೆ ನನ್ನನ್ನು ಕೊಂದೇಹಾಕುವೆನೆಂದು ಬಲವಂತವಾಗಿ ಯಾವನು ನನ್ನನ್ನು ಅನುಗ್ರಹಿಸಲು ನನ್ನ ಕಡೆಗೆ ಓಡಿಬಂದನೋ, ಅಂತಹ ಭಕ್ತವತ್ಸಲನಾದ, ಭಗವಂತನಾದ ಶ್ರೀಮುಕುಂದನೇ ನನಗೆ ಆಶ್ರಯವಾಗಲಿ.

# ಸೂಕ್ತಿಪ್ರಭಾ

## ಉಪನಿಷದ್ವಾಣಿ

**ಈ** ಚಲನಾತ್ಮಕವಾದ ಹಾಗೂ ಅಚಲವಾದ ಎಲ್ಲವನ್ನೂ ಈಶ್ವರನಿಂದ ಮುಚ್ಚಿಬಿಡು. ಅದರಿಂದ ಉಂಟಾದ ತ್ಯಾಗದಿಂದ ಅನುಭವಿಸು. ಆದರೆ ಯಾರ ಧನವನ್ನೂ ಬಯಸಬೇಡ.

(*ಈಶಾವಾಸ್ಯ ಉಪನಿಷತ್, ೧*)

**ಆ**ತ್ಮನು ಅನಿತ್ಯವಸ್ತುಗಳಲ್ಲಿ ನಿತ್ಯನು, ಚೇತನರಿಗೆ ಚೈತನ್ಯನು. ಒಬ್ಬನೇ ಆಗಿದ್ದರೂ ಬಹು ಜೀವರಿಗೆ ಕರ್ಮಫಲವನ್ನು ಕೊಡುತ್ತಾನೆ. ಆತ್ಮನಲ್ಲಿರುವ ಅವನನ್ನು ಯಾವ ವಿವೇಕಿಗಳು ನೋಡುತ್ತಾರೋ ಅವರಿಗೆ ಮಾತ್ರ ಶಾಶ್ವತವಾದ ಶಾಂತಿ ದೊರೆಯುತ್ತದೆ, ಇತರರಿಗಲ್ಲ.

(*ಕಠೋಪನಿಷತ್, ೨-೫-೧೩*)

**ಯಾ**ವಾಗಲೂ ಜೊತೆಯಲ್ಲಿರುವ ಸ್ನೇಹಿತರಾದ ಎರಡು ಹಕ್ಕಿಗಳು ಒಂದೇ ಮರವನ್ನು ಆಶ್ರಯಿಸಿಕೊಂಡಿವೆ. ಅವೆರಡರಲ್ಲಿ ಒಂದು ಸವಿಯಾದ ಹಣ್ಣು ತಿನ್ನುತ್ತಿದೆ. ಇನ್ನೊಂದು ತಿನ್ನದೆ ಸುಮ್ಮನೆ ನೋಡುತ್ತಿದೆ. ಜೀವನು ಮರದಲ್ಲಿ ಹಣ್ಣುಗಳನ್ನು ತಿನ್ನುವುದರಲ್ಲಿ ಮುಳುಗಿರುವನು. ಅದರಿಂದ ಮೋಹಗೊಂಡು ದೈನ್ಯದಿಂದ ಶೋಕಿಸುತ್ತಿರುವನು. ಸೇವಿಸಲ್ಪಟ್ಟವನೂ, ತನಗಿಂತ ಬೇರೆಯಾದವನೂ ಆದ ಈಶ್ವರನನ್ನು ಮತ್ತು ಅವನ ಮಹಿಮೆಯನ್ನು ಯಥಾವತ್ತಾಗಿ ಯಾವಾಗ ನೋಡುತ್ತಾನೆಯೋ ಆಗ ಶೋಕವಿಲ್ಲದವನಾಗುವನು.

(*ಶ್ವೇತಾಶ್ವತರೋಪನಿಷತ್, ೪-೬, ೭*)

**ಹ**ರಿಯುವ ನದಿಗಳು ತಮ್ಮ ನಾಮರೂಪಗಳನ್ನು ಕಳೆದುಕೊಂಡು, ಸಮುದ್ರದಲ್ಲಿ ಹೇಗೆ ಅದೃಶ್ಯವಾಗುವವೋ ಹಾಗೆಯೇ ವಿದ್ವಾಂಸ ನಾದವನು ನಾಮರೂಪಗಳಿಂದ ಬಿಡುಗಡೆ ಹೊಂದಿ ಪರಾತ್ಪರನೂ ದಿವ್ಯನೂ ಆದ ಪುರುಷನನ್ನು ಹೊಂದುವನು.

(*ಪ್ರಶ್ನೋಪನಿಷತ್, ೬.೫*)

**ಇ**ದು ಸತ್ಯ. ಪ್ರಜ್ವಲಿಸುವ ಅಗ್ನಿಕುಂಡದಿಂದ ಸಹಸ್ರಾರು ಕಿಡಿಗಳು ಹೇಗೆ ಹುಟ್ಟುತ್ತವೆಯೊ ಹಾಗೆಯೇ, ಎಲೈ ಸೌಮ್ಯ, ಅಕ್ಷರದಿಂದ ವಿಧವಿಧವಾದ ಜೀವಿಗಳು ಹುಟ್ಟುತ್ತವೆ ಮತ್ತು ಅದರಲ್ಲೇ ಲೀನ ವಾಗುತ್ತವೆ. (*ಮುಂಡಕೋಪನಿಷತ್, ೨-೧-೧*)

**ಬ್ರ**ಹ್ಮವನ್ನು ತಿಳಿದವನು ಬ್ರಹ್ಮವನ್ನು ಹೊಂದುತ್ತಾನೆ. ಈ ವಿಷಯ ದಲ್ಲಿ ಈ ಮಾತನ್ನು ಹೇಳಲಾಗಿದೆ: ಬ್ರಹ್ಮವು ಸತ್ಯ, ಜ್ಞಾನ, ಅನಂತ. ಯಾವನು ಹೃದಯಾಕಾಶದಲ್ಲಿರುವ ಬುದ್ಧಿಯಲ್ಲಿ ಬ್ರಹ್ಮವನ್ನು ಅರಿತು ಕೊಳ್ಳುವನೊ, ಅವನು ಸರ್ವಜ್ಞಸ್ವರೂಪವಾದ ಬ್ರಹ್ಮವಾಗಿ ಎಲ್ಲ ಬಯಕೆಗಳನ್ನೂ ಒಟ್ಟಿಗೆ ಹೊಂದುತ್ತಾನೆ.

(*ತೈತ್ತಿರೀಯೋಪನಿಷತ್, ೨-೧-೧*)

**ಇ**ದೆಲ್ಲವೂ ಓಂ ಎಂಬ ಅಕ್ಷರವುಳ್ಳದ್ದು. ಹಿಂದೆ ಆಗಿಹೋಗಿದ್ದು, ಈಗ ಇರುವುದು, ಮುಂದಿನದು – ಇದೆಲ್ಲವೂ ಓಂಕಾರವೇ. ಇದು ತ್ರಿಕಾಲಾತೀತವಾದುದು ಹಾಗೂ ಇನ್ನೂ ಯಾವುದಿದೆಯೋ ಅದೂ ಕೂಡ ಓಂಕಾರವೇ. (*ಮಾಂಡೂಕ್ಯೋಪನಿಷತ್, ೧*)